ಆಶ್ರಯ ಮನೆಗಳ ಪ್ರಗತಿ

764 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಎಷ್ಟು ಆಶ್ರಯ ಮನೆಗಳನ್ನು ಕಟ್ಟಿಸಲು ಸರ್ಕಾರ ತೀರ್ಮಾನಿಸಿದೆ?

ಆ) ಆಶ್ರಯ ಮನೆಗಳ ಗುಣಮಟ್ಟದ ಬಗ್ಗೆ ಸರ್ಕಾರ ಯಾವ ಯಾವ ಹಂತದಲ್ಲಿ ಪರಿಶೀಲನೆ ಮಾಡುತ್ತಿದೆ?

ಇ) ಬಡವರಿಗೆ ಉಚಿತ ನಿವೇಶನ ಹಂಚಲು ಈ ವರ್ಷ ನಿವೇಶನಕ್ಕಾಗಿ ಎಷ್ಟು ಹಣವನ್ನು ಕಾಯ್ದಿರಿಸಲಾಗಿದೆ?

ಈ) ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಈ ವರ್ಷ 40,000 ಗ್ರಾಮಾಂತರ ಮನೆಗಳ ಗುರಿ ನಿಗಧಿಪಡಿಸುವ ಜೊತೆಗೆ ಹಿಂದಿನ ಸಾಲಿನ ಬಾಕಿ ಉಳಿದು ಪ್ರಗತಿಯಲ್ಲಿರುವ 61389 ಮನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ಆ) ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಹಾಗೂ ಜಿಲ್ಲಾಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಮುಖಾಂತರ ಪರಿಶೀಲನೆ ನಡೆಯುತ್ತಿದೆ. ಹಾಗೂ ವಸತಿ ಸಮಿತಿಗಳು ಸಹ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಬಹುದಾಗಿದೆ.

ಇ) ಪಟ್ಟಣ ಪ್ರದೇಶಗಳಿಗೆ 453.00 ಲಕ್ಷ ರೂ. ಗ್ರಾಮಾಂತರ ಪ್ರದೇಶಗಳಿಗೆ 1482.00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ.

ಈ) ಹಣವನ್ನು ಸರ್ಕಾರ ನಿಗಧಿಪಡಿಸಿರುವ ಭೌತಿಕ ಗುರಿಯನ್ನು ಆಧರಿಸಿ ಅವಶ್ಯಕತೆ ಆಧಾರದ ಮೇಲೆ ಹಣ ಬಿಡುಗಡೆ ಮಾಡಲಾಗುವುದು.

ಚಾಮರಾಜನಗರದಲ್ಲಿನ ಕೊಳಚೆ ಪ್ರದೇಶಗಳ ಅಭಿವೃದ್ಧಿ

765 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಚಾಮರಾಜನಗರವು ಸೇರಿದಂತೆ ಇರುವ ಕೊಳಚೆ ಪ್ರದೇಶಗಳು ಎಷ್ಟು?

ಆ) ಚಾಮರಾಜನಗರದಲ್ಲಿ ಬರುವ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ರಾಜ್ಯದಲ್ಲಿ ಚಾಮರಾಜನಗರದ 12 ಗುರುತಿಸಿದ ಕೊಳಚೆ ಪ್ರದೇಶಗಳು ಸೇರಿದಂತೆ